3. ದರಖಾಸ್ತು ಮಾಡಲ್ಪಟ್ಟ ದರವು ಯಾವ ತಾಲ್ಲೂಕಿಗಾಗಿ ದರಖಾಸ್ತು ಅಂಗೀಕರಿಸಲ್ಪಡುತ್ತೊ ಅಂಥಾ ತಾಲ್ಲೂಕಿಗೆಲ್ಲಾ ಸರಾಸರಿ ವಂದೇಯಾಗಿರತಕ್ಕದ್ದು.

4. ದರಖಾಸ್ತುಗಳು ಮೈಸೂರು ಫಾರೆಸ್ಟ್ಸ್ ಸೂಪರ್‌ಟೆಂಡೆಂಟರವರ ಆಫೀಸಿಗೆ 30ನೇ ಏಪ್ರೆಲ್ ಮುಕ್ತಮಿನಲ್ಲಾಗಲೀ ತಪ್ಪಾ ದ್ವಾಗಲೀ ತಲಪಬೇಕಾಗಿರುತ್ತೆ.

5. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು, ತನ್ನ ಕಂಟ್ರಾಕ್ಟು ಪ್ರಕಾರ ಕ್ರಮವಾಗಿ ನಡೆದುಕೊಳ್ಳುವ ಬಗ್ಗೆ ಪ್ರತಿ ಒಂದು ತಾಲ್ಲೂಕಿಗೋಸ್ಕರ ಇದರಡೀ ಕಂಡಪ್ರಕಾರ ಜಾಮೀನಿ ಮೊಬಲಗು ಹಾಜರ್ಮಾಡುವದಕ್ಕೆ ಒಳಪಟ್ಟಿರತಕ್ಕದ್ದು.

	ರೂಪಾಯಿ
ಹುಣಸೂರು ತಾಲ್ಲೂಕಿನಲ್ಲಿ	250
ಹೆಗ್ಗಡದೇವನಕೋಟೆ ಡಿಟೋ	250
ನಂಜನಗೂಡು ಡಿಟೋ	120
ಗುಂಡ್ಲುಪೇಟೆ ಡಿಟೋ	120
ಚಾಮರಾಜನಗರ ಡಿಟೋ .. —	120

6. ಸಂದಲ್ ಮೆಣಸೇಗಾರನಿಂದಾಗಲೀ ಫಾರೆಸ್ಟರ್‌ನಿಂದಾಗಲೀ ಯಾವದಾದರೂ ಗಂಧದ ಮರಗಳು ಸಾಗಿಸುವ ಬಗ್ಗೆ ಸಿದ್ಧವಾಗಿರುವದಾಗಿ ವರ್ತಮಾನ ತಿಳಿಸಲ್ಪಟ್ಟ ಮೇಲೆ, ಕಂಟ್ರಾಕ್ಟುದಾರನು ಅವುಗಳನ್ನ ಸಂದಲ್ ಕೋಣೆಗಳಿಗೆ 20 ದಿವಸಗಳವಳಗಾಗಿ ಸಾಗಿಸುವ ಬಗ್ಗೆ ಬದ್ಧನಾಗಿರತಕ್ಕದ್ದು.

ಕಂಟ್ರಾಕ್ಟುದಾರನು ವಾಯಿದೆವಳಗಾಗಿ ಅವುಗಳನ್ನ ಸಾಗಿಸುವದಕ್ಕೆ ತಪ್ಪಿದರೆ, ಅವನು ದರ ಭಂಡೀದೋಜೆ 1ಕ್ಕೆ 2 ಆಣೆ ಪ್ರಕಾರ ಕಟ್ಟಿಕೊಡತಕ್ಕದ್ದು, ಅಂದರೆ ಮರಗಳು ಕೋಣೆಗೆ ಬಂದು ತಲಪುವ ಬಗ್ಗೆ ಸಾಪೇಕ್ಷವಾದ ದಿನ 1ಕ್ಕೆ ಟ್ಟ 1ಕ್ಕೆ 4 ಆಣೆ ಪ್ರಕಾರ ತೆರತಕ್ಕದ್ದು.

ಸಿ. ಇ. ಯಿಂ, ರಸ್ಸೆಲ್,
ಫಾರೆಸ್ಟ್ಸ್ ಪ ಗವರ್ನಮೆಂಟ್ ಫಾರಂಗಳ ಸೂಪರ್‌ಟೆಂಡೆಂಟ್.

ಪ ರಿ ಕ್ಷೆ .

ತಾರೀಖು 4ನೇ ಏಪ್ರೆಲ್ 1887.

1887ನೇ ಇಸವಿ ಜೂನ್ ಮಾಹೆಯಲ್ಲಿ ನಡಿಯುವ ಮೈಸೂರ್ ಲೋಕಲ್ ಸರ್ವಿಸ್ ವ ಪ್ಲೀಡರ್‌ಗಳ ಪರಿಕ್ಷೆ ವಿಷಯದಲ್ಲಿ—

ಇದರಿಂದ ಪ್ರಕಟಪಡಿಸುವದೇನಂದರೆ, ಅಸಿಸ್ಟೆಂಟ್ ಕಮ್ಮಿಷನರು, ಮುನಸಿಫರು, ಅಮಲ್ದಾರರು, ಡೆಪ್ಯುಟಿ ಅಮಲ್ದಾರರು ವ ಪ್ಲೀಡರುಗಳ ಉದ್ಯೋಗಕ್ಕಾಗಿ ವಿಧಿಸಲ್ಪಟ್ಟ ಪರಿಕ್ಷೆಗಳು, 1887ನೇ ಇಸವಿ ಜೂನ್ 13ನೇ ಮುಕ್ತಂ ಮತ್ತು ಆ ಮಾರನೇ ದಿವಸಗಳಲ್ಲಿ ಪ್ರತಿ ದಿವಸವೂ ಬೆಳಿಗ್ಗೆ 10½ ಘಂಟೆ ಲಾಗಾಯಿತು ಬೆಂಗಳೂರು ಮೊಕ್ತಾಂ ಪಬ್ಲಿಕ್ ಆಫೀಸಿನಲ್ಲಿಯ ಸೆಂಟ್ರಲ್ ಹಾಲ್‌ನಲ್ಲಿ ನಡಿಸಲ್ಪಡುವದು.

ಪರಿಕ್ಷೆಗಳು ಅಕ್ಷರಗಳಿಂದ ಗುರ್ತು ಮಾಡಲ್ಪಟ್ಟಿವೆ.

ಪ್ರತಿ ಪಾಠದ ಸವಾಲ್ ಪಟ್ಟಿಯು ಕೊಡುವ ತಾರೀಖು ವ ಘಂಟೆ ತೋರಿಸುವ ತಖ್ತೆಯು ಇದರಡೀ ಕಾಣಿಸಿರುತ್ತೆ. ಆಯಾ ಪರಿಕ್ಷೆಗೆ ಇರತಕ್ಕ ದರಖಾಸ್ತುದಾರರು ಆಯಾ ತಾರೀಖುಗಳಲ್ಲಿ ಹಾಜರಿರಬೇಕು.

ಅಸಿಸ್ಟೆಂಟ್ ಕಮ್ಮಿಷನರುಗಳ ಮೊಕರರಾತೀ ಬಗ್ಗೆ ಪರಿಕ್ಷೆ ..	A.
ಮುನಸಿಫರ ಡಿಟೋ ಡಿಟೋ	B.
ಅಮಲ್ದಾರ್ ವ ಡೆಪ್ಯುಟಿ ಅಮಲ್ದಾರರ ಡಿಟೋ ಡಿಟೋ ..	C.
ಪ್ಲೀಡರುಗಳ .. ಡಿಟೋ ಡಿಟೋ ..	D.

ತಾರೀಖು.	ಘಂಟೆ.	ಪಾಠ.	ಪರಿಕ್ಷೆ.
ಸೋಮವಾರ, 13ನೇ ಜೂನ್ 1887.	10 ರಿಂದ 12	ಲ್ಯಾಂಡ್ ಅಕ್ವಿಜಿಶನ್ ಆಕ್ಟ್	A. C.
	12 „ 1½	ರಿಜಿಸ್ಟ್ರೇಷನ್ ಆಕ್ಟ್	A. C. D.
	2 „ 4	ಕ್ಯಾಟಲ್ ಟ್ರೆಸ್ಪಾಸ್ ಆಕ್ಟ್, ಎಕ್ಸೈಸ್ ಆಕ್ಟ್, ಓಪಿಯಂ ಆಕ್ಟ್	A. C.
	4 „ 5½	ಸ್ಟ್ಯಾಂಪ್ ಮತ್ತು ಕೋರ್ಟ್ ಫೀಸ್ ಆಕ್ಟ್	A. C. D.
ಮಂಗಳವಾರ, 14ನೇ ಜೂನ್ 1887.	10½ „ 11½	ಫಾರೆಸ್ಟ್ ರೂಲ್ಸ್	A. C.
	11½ „ 2	ರೆವಿನ್ಯೂ ಮ್ಯಾನ್ಯುಯಲ್	A. C. D.
		ಸರ್ವೆ ಮ್ಯಾನ್ಯುಯಲ್	A. C.
	2½ „ 4½	ಸಿವಿಲ್ ಅಕ್ಕವುಂಟ್ಸ್ ಮತ್ತು ಫಿನಾನ್ಷಿಯಲ್ ಕೋಡುಗಳು	A. C.
ಬುಧವಾರ, 15ನೇ ಜೂನ್ 1887.	10½ „ 2	ಇಂಡಿಯನ್ ಪಿನಲ್‌ಕೋಡ್	A. B. C. D.
	2½ „ 5½	ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್	A. B. C. D.
ಗುರುವಾರ, 16ನೇ ಜೂನ್ 1887.	10½ „ 1	ಟಾರ್ಟ್ಸ್	A. B. D.
	1½ „ 4	ಎವಿಡೆನ್ಸ್ ಆಕ್ಟ್	A. B. C. D.
	4 „ 5	ಪೋಲೀಸ್ ರೂಲ್ಸ್	A. C.
ಶುಕ್ರವಾರ, 17ನೇ ಜೂನ್ 1887.	10½ „ 1½	ಹಿಂದೂ ಲಾ	A. B. D.
	2 „ 5	ಮಹಮ್ಮದೀಯ ಲಾ	A. B. D.
ಶನಿವಾರ, 18ನೇ ಜೂನ್ 1887.	10½ „ 1½	ಸ್ಪೆಸಿಫಿಕ್ ರಿಲೀಫ್ ಆಕ್ಟ್	A. B. D.
	2 „ 5	ಸಿವಿಲ್ ಪ್ರೊಸಿಜ್ಯೂರ್ ಕೋಡ್	A. B. D.
ಸೋಮವಾರ, 20ನೇ ಜೂನ್ 1887.	10½ „ 12½	ಮಾರ್ಟ್‌ಗೇಜ್ ಕಾನೂನ್	A. B. D.
	1 „ 3	ಲಿಮಿಟೇಷನ್ ಆಕ್ಟ್	A. B. D.
	3 „ 5	ಕಂಟ್ರಾಕ್ಟ್ ಕಾನೂನ್	A. B. D.
ಮಂಗಳವಾರ, 21ನೇ ಜೂನ್ 1887.	10½ „ 12½	ವ್ಯವಹರಣೆ	D.

ಎಲ್. ಅನಂತಸ್ವಾಮಿ ರಾವ್,
ಸೆಕ್ರಟೇರಿ.